## ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ 'ಮಾನವ'

ಮಾನವ ತನ್ನ 'ವ್ಯಕ್ತಿತ್ವ'ದ ಬಗ್ಗೆ ಅಭಿಮಾನ ಪಡುತ್ತಾನೆ. ಸಾಧಾರಣ ಮಾನವ, 'ದೇವರೊಡಗಿನ ತನ್ನ ಆಧ್ಯಾತ್ಮಿಕ ಸಂಯೋಗ' ಒಬ್ಬ ವ್ಯಕ್ತಿಯಾಗಿ, ತನ್ನ ಅಸ್ತಿತ್ವವನ್ನು ಸಂಪೂರ್ಣವಾಗಿ ನಾಶಪಡಿಸುತ್ತದೆ ಎಂದು ಚಿಂತಿಸುತ್ತಾನೆ. ಸ್ವಾಮೀಜಿ ಪಾಶ್ಚಾತ್ಯ ದೇಶಗಳ ಶ್ರೋತೃಗಳ ಮುಂದೆ 'ಅದ್ವೈತ ಸಿದ್ಧಾಂತ'ವನ್ನು ಪ್ರಸ್ತುತಪಡಿಸಿದಾಗ, ಅವರಲ್ಲಿ ಇದೇ ಬಗೆಯ ಮನೋಭಾವನೆಯನ್ನು ಗುರುತಿಸಿದರು. ಹಾಗೆಯೇ ಮಾನವೀಯತಾವಾದವನ್ನು ಪ್ರತಿಪಾದಿಸುವ ಪಾಶ್ಚಾತ್ಯ ಚಿಂತಕರು ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಈ ವಾದವನ್ನು ಅಲ್ಲಗಳೆಯುತ್ತ, ಸ್ವಾಮೀಜಿ ಹೀಗೆ ಹೇಳುತ್ತಾರೆ: "ಒಂದು ಸಣ್ಣ ದೇಹದ ಅರಿವನ್ನು ಅನುಭವಿಸುವುದರಿಂದ ಸಂತೋಷ ಸಿಗುವುದಾದರೆ, ಎರಡು ದೇಹಗಳ ಅರಿವನ್ನು ಅನುಭವಿಸುವುದು ಹೆಚ್ಚಿನ ಸಂತೋಷವನ್ನು ನೀಡಬೇಕು. ದೇಹಗಳ ಸಂಖ್ಯೆ ಹೆಚ್ಚಿದಂತೆ ಅವುಗಳ ಅರಿವು ನೀಡುವ ಸಂತೋಷವೂ ಹೆಚ್ಚುತ್ತಾ ಹೋಗಬೇಕು. ಅಂತಿಮ ಗುರಿಯಾದ ಕೇವಲ ಆನಂದವನ್ನು ಪಡೆಯುವುದು ವಿಶ್ವಪ್ರೇಮ ಪ್ರಾಪ್ತವಾದಾಗ ಮಾತ್ರ... ಆದ್ದರಿಂದ ಅನಂತ ವಿಶ್ವವ್ಯಕ್ತಿತ್ವವನ್ನು ಪಡೆಯಬೇಕಾದಲ್ಲಿ ಈ ಕ್ಷುದ್ರ, ಸೆರೆಬದ್ಧ ವ್ಯಕ್ತಿತ್ವ ಹೋಗಬೇಕು... ಭೌತಿಕ ವ್ಯಕ್ತಿತ್ವ ಎನ್ನುವುದು ಒಂದು ಭ್ರಾಂತಿ. ಈ ದೇಹ ಅಖಂಡವಾದ ಭೌತ ವಸ್ತುವಿನ ಸಾಗರದಲ್ಲಿ ನಿರಂತರವೂ ಬದಲಾಗುತ್ತಿರುವ ಒಂದು ಭಾಗ ಎಂಬುದನ್ನು ವಿಜ್ಞಾನ ಸಿದ್ಧಮಾಡಿ ತೋರಿಸಿದೆ. ಹಾಗೆಯೇ ನಮ್ಮ ಇನ್ನೊಂದು ಭಾಗವಾದ ಆತ್ಮ ಕೂಡ ಒಂದೇ ಎನ್ನುವುದು ಕೂಡ ಸ್ವಾಭಾವಿಕವಾಗಿ ತಿಳಿದುಬರುವ ಸಿದ್ಧಾಂತವೇ ಆಗಿದೆ."

ರಾಮಕೃಷ್ಣ ಮಠ ಮತ್ತು ಮಿಷನ್ ಮಹಾಸಂಘದ ಅಧಿಕೃತ ವೆಬ್‌ಸೈಟ್, ಸ್ವಾಮಿ ವಿವೇಕಾನಂದರ 'ಮಾನವ ಪರಿಕಲ್ಪನೆ'ಯ ಸೊಗಸಾದ ಸಾರಾಂಶವನ್ನು ಒಳಗೊಂಡಿದೆ. ಆ ವಿಷಯಕ್ಕೆ ಸಂಬಂಧಪಟ್ಟ ಭಾಗ ಹೀಗಿದೆ: "ಸ್ವಾಮಿ ವಿವೇಕಾನಂದರ 'ಜೀವಿಯಲ್ಲಿ ಸುಪ್ತವಾಗಿರುವ ದಿವ್ಯತೆ'ಯ ಸಿದ್ಧಾಂತವು ವಿನೂತನವಾದ, ಹಾಗೆಯೇ ಉದಾತ್ತವಾದ ಮಾನವ ಪರಿಕಲ್ಪನೆಗೆ ಎಡೆಮಾಡಿಕೊಡುತ್ತದೆ. ಇಂದಿನ ಯುಗ ಮಾನವೀಯತೆಯ ಯುಗ. ಎಲ್ಲ ಬಗೆಯ ಹಿತಾಸಕ್ತಿಗಳೂ ಮಾನವನನ್ನೇ ಕೇಂದ್ರವನ್ನಾಗಿ ಇಟ್ಟುಕೊಳ್ಳಬೇಕೆಂದೂ, ಎಲ್ಲ ಚಟುವಟಿಕೆಗಳ ಮತ್ತು ಚಿಂತನೆಗಳ ಕೇಂದ್ರಬಿಂದು ಕೂಡ ಮಾನವನೇ ಆಗಿರಬೇಕೆಂದೂ ಈ ಬಗೆಯ ಮಾನವೀಯತೆ ಪ್ರತಿಪಾದಿಸುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನಗಳ ಮೂಲಕ ಮಾನವನು ಅಧಿಕಾಧಿಕ ಸಮೃದ್ಧಿಯನ್ನೂ, ಸಾಮರ್ಥ್ಯವನ್ನೂ ಪಡೆದುಕೊಂಡಿದ್ದಾನೆ. ಸಂವಹನ ಮತ್ತು ಸಾರಿಗೆಯ ಆಧುನಿಕ ವಿಧಾನಗಳು ಮಾನವ ಸಮಾಜವನ್ನು 'ಜಾಗತಿಕ ಗ್ರಾಮ'ವನ್ನಾಗಿ ಪರಿವರ್ತಿಸಿದೆ.  ಆದರೆ, ಮಾನವನ ಅಧಃಪತನವು ಯಾವ ತಡೆಯೂ ಇಲ್ಲದೆ, ಮುಂದುವರೆದುಕೊಂಡು ಹೋಗುತ್ತಲೇ ಇದೆ. ಆಧುನಿಕ ಸಮಾಜದಲ್ಲಿ ಹೆಚ್ಚುತ್ತಿರುವ ಮುರಿದ ಕುಟುಂಬಗಳು, ಅನೈತಿಕತೆ, ಹಿಂಸೆ, ಅಪರಾಧ ಮುಂತಾದವು ಇದಕ್ಕೆ ಸಾಕ್ಷಿಯಾಗಿವೆ. 'ಪ್ರತಿಯೊಬ್ಬ ಮಾನವನಲ್ಲಿಯೂ ದಿವ್ಯತೆಯು ಹುದುಗಿದೆ' ಎನ್ನುವ ಸ್ವಾಮಿ ವಿವೇಕಾನಂದರ ಪರಿಕಲ್ಪನೆಯು ಈ ಅಧಃಪತನವನ್ನು ತಡೆಗಟ್ಟಬಲ್ಲುದು; ಮಾನವ ಸಂಬಂಧಗಳನ್ನು ದಿವ್ಯವಾಗಿಸಬಲ್ಲದು ಹಾಗೂ ಆ ಮೂಲಕ, ಬಾಳುವೆಯನ್ನು ಅರ್ಥಪೂರ್ಣವನ್ನಾಗಿಯೂ, ಮೌಲ್ಯಯುತವನ್ನಾಗಿಯೂ ಮಾಡಬಲ್ಲದು. ಹೀಗೆ ಸ್ವಾಮೀಜಿ 'ಆಧ್ಯಾತ್ಮಿಕ ಮಾನವೀಯತೆ'ಯ ಆಧಾರಸ್ತಂಭವನ್ನು ನೆಟ್ಟಿದ್ದಾರೆ. ಅದೇ ಈಗ ಜಗತ್ತಿನಾದ್ಯಂತ ಕಂಡುಬರುತ್ತಿರುವ ನೂತನ–ಮಾನವೀಯತಾ ಆಂದೋಲನಗಳು ಮತ್ತು ಧ್ಯಾನ, ಜೆನ್ ಮುಂತಾದವುಗಳಲ್ಲಿನ  ಆಸಕ್ತಿಯ ರೂಪದಲ್ಲಿ ಪ್ರಕಟಗೊಳ್ಳುತ್ತಿದೆ" (www.belurmath.org).

## ಸೇವಾಯೋಗ

ವೇದಾಂತದ ಈ ಭಾವನೆಯ ಆಧಾರದ ಮೇಲೆಯೇ ಸ್ವಾಮಿ ವಿವೇಕಾನಂದರ ಸೇವಾಯೋಗದ ತತ್ತ್ವ ಹೊರಹೊಮ್ಮಿದ್ದನ್ನು ನಾವು ಕಾಣುತ್ತೇವೆ. ಶ್ರೀರಾಮಕೃಷ್ಣರು ಹೇಳಿದ 'ಶಿವಜ್ಞಾನೇ ಜೀವ ಸೇವಾ' ಎಂಬ ಮಾತನ್ನು, 'ಪ್ರತಿಯೊಬ್ಬ ಮನುಷ್ಯನಲ್ಲಿಯೂ ಭಗವಂತನನ್ನು ಕಂಡು ಸೇವೆ ಮಾಡಬೇಕು' ಎನ್ನುವ ಪರಿಭಾಷೆಯಲ್ಲಿ ಜನಸಾಮಾನ್ಯರಿಗೂ ತಿಳಿಯಹೇಳಿ, ಸೇವೆಯ ನೂತನ ಆಂದೋಲನವನ್ನು ಹುಟ್ಟುಹಾಕಿದ ಕೀರ್ತಿ ಸ್ವಾಮಿ ವಿವೇಕಾನಂದರಿಗೆ ಸೇರುತ್ತದೆ. "ನಿಜವಾದ ದೇವರೆಂದರೆ ನಡೆದಾಡುವ ಮಾನವನೇ. ಸ್ಥಾವರದ ಕಲ್ಲುಗಳಲ್ಲಿರುವ ದೇವರನ್ನು ಪೂಜಿಸುವುದಕ್ಕಿಂತ ಜಂಗಮದ ಮಾನವನನ್ನು ಸೇವಿಸುವುದು ಭಗವಂತನ ನಿಜವಾದ ಆರಾಧನೆಯಾಗುತ್ತದೆ. ಭಗವಂತನ ಶ್ರೇಷ್ಠಮೂರ್ತಿ ಮಾನವ ದೇಹ. ಭಗವಂತನ ಉತ್ತಮ ಅಭಿವ್ಯಕ್ತಿ ಇರುವುದು ಮಾನವಾತ್ಮದಲ್ಲಿ" – ಹೀಗೆ ಸ್ವಾಮೀಜಿ ಮಾನವನನ್ನೇ ತಮ್ಮ ಸಿದ್ಧಾಂತವೆಲ್ಲದರ ಕೇಂದ್ರಬಿಂದುವನ್ನಾಗಿ ಮಾಡಿಕೊಂಡರು.

ಚೆನ್ನೈನಲ್ಲಿ ಇರುವಾಗ ನೂರಾರು  ಜನರು ಸ್ವಾಮಿ ವಿವೇಕಾನಂದರನ್ನು ಕಾಣಲು ಬರುತ್ತಿದ್ದರು. ಅವರಿಗೆ ಸ್ವಾಮೀಜಿಯವರು ಸೇವಾಯೋಗದ ಸಂದೇಶವನ್ನು ಹೀಗೆ ನೀಡುತ್ತಿದ್ದರು: "ಭಗವಂತನ ಸೇವೆ ಮತ್ತು ಭಗವಂತನನ್ನು ಹುಡುಕುವುದು – ಇವುಗಳನ್ನು ಮಾಡುವ ಉತ್ತಮವಾದ ವಿಧಾನವೆಂದರೆ ಅವಶ್ಯವಿದ್ದವರಿಗೆ ಸೇವೆ, ಹಸಿವಾಗಿರುವವರಿಗೆ ಆಹಾರವನ್ನು ಕೊಡುವುದು, ದುಃಖದಲ್ಲಿರುವವರನ್ನು ಸಾಂತ್ವನಪಡಿಸುವುದು, ತುಳಿಯಲ್ಪಟ್ಟವರು ಮತ್ತು ಅಸಹಾಯಕರಿಗೆ ಸಹಾಯ ಮಾಡುವುದು ಮತ್ತು ರೋಗದಿಂದ ನರಳುತ್ತಿರುವವರಿಗೆ ಔಷಧೋಪಚಾರ ಮಾಡುವುದು."

ಧ್ಯಾನಮಾಡಲು ಆಗುತ್ತಿಲ್ಲ ಎಂಬ ಸಮಸ್ಯೆಯನ್ನು ಮುಂದಿಟ್ಟ ಯುವಕನೊಬ್ಬನಿಗೆ ಸ್ವಾಮೀಜಿ ಹೀಗೆ ಹೇಳುತ್ತಾರೆ: "ನೀನು ನನ್ನ ಮಾತನ್ನು ನಂಬುವೆಯಾದರೆ, ಮೊದಲು ನಿನ್ನ ಕೊಠಡಿಯ ಬಾಗಿಲನ್ನು ತೆರೆದುಬಿಡು. ಕಣ್ಣನ್ನು ಮುಚ್ಚಿಕೊಳ್ಳುವ ಬದಲು ತೆರೆದುನೋಡು. ನಿನ್ನ ಮನೆಯ ಆಸುಪಾಸಿನಲ್ಲಿಯೇ ನೂರಾರು ಬಡ ಮತ್ತು ಅಸಹಾಯಕ ಜನರು ಇರುವರು. ಅವರಿಗೆ ನಿನ್ನ ಶಕ್ತಿ ಮೀರಿ ಸೇವೆ ಮಾಡು. ಯಾರು ಅನಾರೋಗ್ಯದಿಂದ ನರಳುತ್ತಿದ್ದಾರೋ, ನೋಡಿಕೊಳ್ಳಲು ಯಾರೂ ಇಲ್ಲವೋ, ಅಂಥವರಿಗೆ ನೀನು ಔಷಧಿ ಮತ್ತು ಪಥ್ಯಾಹಾರವನ್ನು ನೀಡಿ, ಅವರ ಶುಶ್ರೂಷೆ ಮಾಡಬೇಕು. ಯಾರಿಗೆ ತಿನ್ನುವುದಕ್ಕೆ ಏನೂ ಇಲ್ಲವೋ, ಅವರಿಗೆ

ನೀನು ಊಟ ಹಾಕಬೇಕು. ಯಾರು ಅವಿದ್ಯಾವಂತರೋ, ಅವರಿಗೆ ನೀನು ಶಿಕ್ಷಣ ಕೊಡಬೇಕು. ಏಕೆಂದರೆ ನೀನು ಸುಶಿಕ್ಷಿತನಾಗಿರುವೆ. ನನ್ನ ಸಲಹೆ ಏನೆಂದರೆ, ನಿನಗೆ ಶಾಂತಿ ಬೇಕಾದರೆ, ನಿನ್ನ ಕೈಲಾದ ಮಟ್ಟಿಗೆ, ನೀನು ಇತರರ ಸೇವೆ ಮಾಡಬೇಕು."

## ಮಾನವ ಸಂಕಷ್ಟಗಳ ಬಗ್ಗೆ ಸ್ವಾಮಿ ವಿವೇಕಾನಂದರು

ಸಾಂಪ್ರದಾಯಿಕ ವೇದಾಂತವು ಮಾನವನ ಸಂಕಷ್ಟಗಳು ಉಂಟಾಗುವುದು ಅವಿದ್ಯೆಯಿಂದ ಎಂದು ಹೇಳುತ್ತದೆ; ಜ್ಞಾನ ಮಾತ್ರವೇ ಇದಕ್ಕೆ ಪರಿಹಾರ ಎಂದು ಪ್ರತಿಪಾದಿಸುತ್ತದೆ. ಸಾಮಾನ್ಯ ವ್ಯಕ್ತಿ ತನ್ನ ದಿನನಿತ್ಯದ ಜೀವನದಲ್ಲಿ ಎದುರಿಸಬೇಕಾದ ಹಲವಾರು ಕಷ್ಟ ತಾಪತ್ರಯಗಳಿಗೆ ಅದು ಮುಖವನ್ನು ತಿರುಗಿಸಿಹಾಕಿಕೊಂಡಂತೆ ಕಾಣುತ್ತದೆ. ಆದರೆ ಸ್ವಾಮಿ ವಿವೇಕಾನಂದರು ಸಾಮಾನ್ಯ ಮಾನವ ಒಳಗಾಗುವ ದೈಹಿಕ ಅಥವಾ ಮಾನಸಿಕ ಸಂಕಷ್ಟಗಳನ್ನು ಎಂದಿಗೂ ಕಡೆಗಣಿಸುವುದಿಲ್ಲ; ಅವೆಲ್ಲವೂ ಬರಿಯ ಭ್ರಮೆಯೆಂದು ಹೇಳುತ್ತ, ಎಂದಿಗೂ ಅವುಗಳನ್ನು ತಳ್ಳಿಹಾಕುವ ಪ್ರಯತ್ನ ಮಾಡುವುದಿಲ್ಲ. ಅದಕ್ಕೆ ಬದಲಾಗಿ, ಸಂಕಷ್ಟದಲ್ಲಿ ಸಿಲುಕಿದ ಮಾನವತೆಗೆ ಹೆಚ್ಚಿನ ಮಟ್ಟಿಗೆ ಸಾಂತ್ವನವನ್ನು ಒದಗಿಸುವ ಸಾಧನವನ್ನು, ವೇದಾಂತ ತತ್ತ್ವದಲ್ಲಿಯೇ ಹುಡುಕುವ ಪ್ರಯತ್ನವನ್ನು ಮಾಡುತ್ತಾರೆ. ಸ್ವಾಮೀಜಿಯ ಪ್ರಕಾರ, ನಮ್ಮೆಲ್ಲ ಸಂಕಷ್ಟಗಳಿಗೂ ಮೂಲಕಾರಣವೆಂದರೆ 'ದುರ್ಬಲತೆ.' ದುರ್ಬಲತೆ ಉಂಟಾಗುವುದು 'ಅವಿದ್ಯೆ'ಯಿಂದ. ಈ ಬಗ್ಗೆ ಸ್ವಾಮೀಜಿ ಹೀಗೆ ಹೇಳುತ್ತಾರೆ: "ದುರ್ಬಲತೆಯೆಂಬುದು ಸಂಕಷ್ಟದ ಕಾರಣಗಳಲ್ಲಿ ಒಂದಾಗಿದೆ. ನಾವು ದುರ್ಬಲರಾಗಿದ್ದೇವೆ. ಅದಕ್ಕೆಂದೇ ನಾವು ಕಷ್ಟಕ್ಕೆ ಒಳಗಾಗುತ್ತೇವೆ. ನಾವು ದುರ್ಬಲರಾಗಿರುವುದರಿಂದಲೇ, ಸುಳ್ಳಾಡುತ್ತೇವೆ, ಕದಿಯುತ್ತೇವೆ ಮತ್ತು ಇತರ ಅಪರಾಧಗಳನ್ನು ಮಾಡುತ್ತೇವೆ. ನಾವು ಸಂಕಷ್ಟಕ್ಕೆ ಒಳಗಾಗುವುದೂ, ನಾವು ದುರ್ಬಲರಾಗಿರುವುದರಿಂದಲೇ. ನಮ್ಮನ್ನು ದುರ್ಬಲರನ್ನಾಗಿ ಮಾಡುವುದು ಯಾವುದೂ ಇಲ್ಲದಾಗ, ಮರಣವೂ ಇರುವುದಿಲ್ಲ, ಕಷ್ಟಗಳೂ ಇರುವುದಿಲ್ಲ. ನಮ್ಮ ಭ್ರಮೆಯಿಂದಲೇ ಎಲ್ಲ ಕಷ್ಟಗಳೂ ನಮಗೆ ಉಂಟಾಗುವುದು. ಆ ಭ್ರಮೆಯನ್ನು ತ್ಯಜಿಸಿ; ಆಗ ಅವೆಲ್ಲವೂ ನಶಿಸಿಹೋಗುತ್ತದೆ. ಇದು ನಿಜವಾಗಲೂ ಇಷ್ಟು ಸರಳ ಮತ್ತು ಸ್ಪಷ್ಟ."

## ಮಾನವೀಯ – ಸಂಬಂಧಗಳ ಬಗ್ಗೆ ಸ್ವಾಮಿ ವಿವೇಕಾನಂದರು

ವೇದಾಂತದ ಭಾವನೆಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದರಿಂದ ಮತ್ತು ಅವುಗಳನ್ನು ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ, ನಮ್ಮ ಸಂಬಂಧಗಳಲ್ಲಿ ಗುಣಾತ್ಮಕ ಪರಿವರ್ತನೆಯನ್ನು ತಂದುಕೊಳ್ಳಬಹುದು ಎಂಬುದು ಸ್ವಾಮೀಜಿಯವರ ಅಭಿಪ್ರಾಯ. ಈ ಬಗ್ಗೆ ಅವರು ಹೀಗೆ ಹೇಳುತ್ತಾರೆ: "ವೇದಾಂತದ ಆದರ್ಶವೆಂದರೆ ಮಾನವನನ್ನು ಅವನು ಇರುವ ರೀತಿಯಲ್ಲಿಯೇ, ಯಥಾವತ್ತಾಗಿ ತಿಳಿದುಕೊಳ್ಳುವುದು. ಇದೇ ಅದರ ಸಂದೇಶ ಕೂಡ. ಜೀವಂತ ಭಗವಂತನಾದ ನಿಮ್ಮ ಸಹೋದರ ಮಾನವನನ್ನು ನಿಮಗೆ ಆರಾಧಿಸಲು ಸಾಧ್ಯವಾಗದಿದ್ದರೆ, ಅಭಿವ್ಯಕ್ತವಾಗದ (ಅಜ್ಞಾತವಾಗಿರುವ) ದೇವರನ್ನು ಹೇಗೆ ತಾನೇ ಪೂಜಿಸುತ್ತೀರಿ? ಬೈಬಲ್ ಏನು ಹೇಳುತ್ತದೆಂದು ಗೊತ್ತೇನು? 'ನಿನ್ನ ಕಣ್ಣಿಗೆ ಕಾಣುವ ಸಹೋದರನನ್ನು ನೀನು ಪ್ರೀತಿಸಲಾಗದಿದ್ದರೆ, ಕಣ್ಣಿಗೆ ಕಾಣದ ದೇವರನ್ನು ಹೇಗೆ ತಾನೇ ನೀನು ಪ್ರೀತಿಸುವೆ?' ಮಾನವ ಮುಖದಲ್ಲಿ ನೀವು ಭಗವಂತನನ್ನು ನೋಡಲಾಗದಿದ್ದರೆ, ಆತನನ್ನು ಮೋಡಗಳ ಮರೆಯಲ್ಲಿಯೋ ಅಥವಾ ನೀರಸ, ಜಡವಸ್ತುವಿನಿಂದ ಮಾಡಿದ ವಿಗ್ರಹಗಳಲ್ಲಿಯೋ ಅಥವಾ ನಿಮ್ಮ ಮಿದುಳುಗಳು ಹುಟ್ಟುಹಾಕಿರುವ ಬರಿಯ ಕಟ್ಟುಕಥೆಗಳಲ್ಲಿಯೋ ಹೇಗೆ ತಾನೇ ಕಾಣುವಿರಿ? ಭಗವಂತನನ್ನು ಪುರುಷರು ಮತ್ತು ಮಹಿಳೆಯರಲ್ಲಿ ಯಾವತ್ತು ಕಾಣುವುದಕ್ಕೆ ನೀವು ಆರಂಭಿಸುವಿರೋ, ಆವತ್ತಿನಿಂದ ಮಾತ್ರವೇ ನಿಮ್ಮನ್ನು ನಾನು ಧಾರ್ಮಿಕರೆಂದು ಕರೆಯುವೆನು. ಆಗ ಮಾತ್ರ ಒಬ್ಬ ವ್ಯಕ್ತಿ ಬಲಗೆನ್ನೆಗೆ ಹೊಡೆದಾಗ, ಎಡಗೆನ್ನೆಯನ್ನು ತೋರಿಸುವುದು ಹೇಗೆ ಎಂಬುದರ ಅರ್ಥ ನಿಮಗೆ ಆಗುವುದು. ನೀವು ಮಾನವನಲ್ಲಿ ದೇವರನ್ನು ಕಂಡಾಗ ಮಾತ್ರ, ಎಲ್ಲವನ್ನೂ – ಒಂದು ಹುಲಿಯನ್ನು ಕೂಡ – ನೀವು ಆದರದಿಂದ ಕಾಣಬಲ್ಲಿರಿ. ನಿಮ್ಮ ಹತ್ತಿರಕ್ಕೆ ಯಾರ್ಯಾರು ಬರುತ್ತಾರೋ ಅವರೆಲ್ಲರೂ, ತಂದೆ, ತಾಯಿ, ಸ್ನೇಹಿತ, ಮಗು ಮುಂತಾದ ಹಲವಾರು ರೂಪಗಳನ್ನು ತಳೆದ, ಸನಾತನ ಸತ್ಯವೂ ಆನಂದಮಯವೂ ಆದ ಪರಮಪ್ರಭುವಿನ ಹಾಗೆ ನಿಮಗೆ ಕಂಡುಬರುತ್ತಾರೆ. ನಮ್ಮ ಆತ್ಮವೇ ಅವರೆಲ್ಲರ ರೂಪಗಳನ್ನು ಧರಿಸಿಕೊಂಡು, ನಮ್ಮ ಜೊತೆ ಲೀಲೆಯಾಡುತ್ತಲಿದೆ ಎಂದು ಆಗ ನೀವು ತಿಳಿದುಕೊಳ್ಳುತ್ತೀರಿ. ನಮ್ಮ ಮಾನವೀಯ ಸಂಬಂಧಗಳನ್ನು ಈ ರೀತಿ ದಿವ್ಯಮಯವನ್ನಾಗಿ ನಾವು ಮಾಡಿಕೊಳ್ಳಬಹುದು. ಅದೇ ರೀತಿ, ಭಗವಂತನ ಜೊತೆಗೆ ಇರುವ ನಮ್ಮ ಸಂಬಂಧವೂ ಈ ರೂಪಗಳಲ್ಲಿ ಯಾವುದಾದರೂ ರೂಪವನ್ನು ಪಡೆದುಕೊಳ್ಳಬಹುದು. ಅಂದರೆ ನಾವು ಭಗವಂತನನ್ನು, ನಮ್ಮ ತಂದೆ, ತಾಯಿ, ಸ್ನೇಹಿತ ಅಥವಾ ಪ್ರಿಯತಮ ಮುಂತಾದ ಯಾವ ರೂಪದಲ್ಲಿ ಬೇಕಾದರೂ ಕಾಣಬಹುದು." ಸ್ವಾಮೀಜಿಯವರು ನಮ್ಮ ಮುಂದೆ ಇಟ್ಟಿರುವ ಈ ಆದರ್ಶದಲ್ಲಿ ನಾವು ಕಾಣುವುದೇನು? ಪರಿಪೂರ್ಣ ಮಾನವೀಯತೆಯನ್ನು ಹಾಗೂ ಪರಿಶುದ್ಧ ಹಾಗೂ ಮೂಲರೂಪದಲ್ಲಿ ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಪರಿಣಾಮಕಾರಿ ವಿಧಾನವನ್ನು.

## ಉಪಸಂಹಾರ

ಸ್ವಾಮಿ ವಿವೇಕಾನಂದರ ಮಾನವತಾವಾದವು ಆಧ್ಯಾತ್ಮಿಕ ಸಾಕ್ಷಾತ್ಕಾರದ ಮೇಲೆ ಆಧಾರಿತವಾಗಿದೆ. ವೇದಾಂತವು ಸತ್ಯ ಮತ್ತು ಅನಂತತೆಗಳನ್ನೇ ಪ್ರತಿಪಾದಿಸುತ್ತದೆ. ಅದೇ ರೀತಿ ವೇದಾಂತವನ್ನೇ ಆಧರಿಸಿದ ಸ್ವಾಮಿ ವಿವೇಕಾನಂದರ ಮಾನವತಾವಾದ ಕೂಡ ಜೀವನದ ಚಿರಂತನ ನಿಯಮಗಳ ಮೇಲೆಯೇ ಆಧರಿಸಿದೆ. ಇಲ್ಲಿ ನಾವು ಧಾರ್ಮಿಕತೆ ಮತ್ತು ಲೌಕಿಕತೆ, ಇಂದ್ರಿಯ ಜಗತ್ತು ಮತ್ತು ಇಂದ್ರಿಯಾತೀತ ಜಗತ್ತು, ವ್ಯಷ್ಟಿ ಮತ್ತು ಸಮಷ್ಟಿ – ಇವುಗಳ ನಡುವಣ ಪರಿಪೂರ್ಣ ಸಾಮರಸ್ಯವನ್ನು ಕಾಣುತ್ತೇವೆ.

ಇಂದು ಈ ಜಗತ್ತಿಗೆ ಬೇಕಾದುದು ಘರ್ಷಣೆ ಅಥವಾ ಕಲಹವಲ್ಲ; ಔದಾರ್ಯ ಮತ್ತು ಸ್ವೀಕಾರ. ಯಾವುದೇ ತೆರನಾದ ಮಾನವತಾವಾದದ ಗುರಿ ಇದೇ ಆಗಿರಬೇಕು. ಸ್ವಾಮಿ ವಿವೇಕಾನಂದರು ಬದುಕಿಬಾಳಿದ ಮತ್ತು ಬೋಧಿಸಿದ ವೇದಾಂತ ಮಾನವತಾವಾದವು ಈ ಉನ್ನತ ಧ್ಯೇಯದ ಅತ್ಯಂತ ಶ್ರೇಷ್ಠಮಟ್ಟದ ನಿದರ್ಶನವಾಗಿದೆ.